# ಸಿಎಫ್‌ಟಿಆರ್‌ಐನಿಂದ ಸಿರಿಧಾನ್ಯದ ಬನ್

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು (ಸಿಎಫ್‌ಟಿಆರ್‌ಐ) ಸಿರಿಧಾನ್ಯದ ಬನ್ ತಯಾರಿಸಿದ್ದು, 'ಮೆಕ್‌ಡೊನಾಲ್ಡ್' ಕಂಪನಿಯು ಬರ್ಗರ್‌ನಲ್ಲಿ ಬಳಸಲಿದೆ.

'ಜಂಟಿಯಾಗಿ ಅಭಿವೃದ್ಧಿಪಡಿಸಿರುವ ಬನ್‌ನಲ್ಲಿ ಜೋಳ, ರಾಗಿ, ಸಜ್ಜೆ, ಬರಗು ಹಾಗೂ ಹಾರಕ ಧಾನ್ಯಗಳಿವೆ' ಎಂದು ಸಂಸ್ಥೆಯ ನಿರ್ದೇಶಕಿ ಶ್ರೀದೇವಿ ಅನ್ನಪೂರ್ಣ ಸಿಂಗ್ ಬುಧವಾರ 'ಪ್ರಜಾವಾಣಿ'ಗೆ ತಿಳಿಸಿದರು.



ಸಿಎಫ್‌ಟಿಆರ್‌ಐ ಅಭಿವೃದ್ಧಿ ಪಡಿಸಿದ ಸಿರಿಧಾನ್ಯದ ಬನ್

'ಕಂಪನಿಯು ಸಲ್ಲಿಸಿದ ಪ್ರಸ್ತಾವದ ಮೇರೆಗೆ ಮೂರು ತಿಂಗಳ ಹಿಂದೆ ಒಡಂಬಡಿಕೆ ಮಾಡಿಕೊಂಡ ನಂತರ ಸಂಸ್ಥೆಯ ವಿಜ್ಞಾನಿಗಳು ಬನ್ ಅಭಿವೃದ್ಧಿಪಡಿಸಿದ್ದಾರೆ. ಐದು ಸಿರಿಧಾನ್ಯಗಳ ಶೇ 22ರಷ್ಟು ಸಾರವನ್ನು ಬನ್ ಒಳಗೊಂಡಿದ್ದು, ಮಿಕ್ಕಿದ್ದು ಗೋಧಿ ಅಂಶವಾಗಿರುವುದರಿಂದ ಆಕಾರ, ವಿನ್ಯಾಸ ಅಷ್ಟೇ ಉತ್ಕೃಷ್ಟವಾಗಿರಲಿದೆ' ಎಂದರು.

'ರಾಷ್ಟ್ರೀಯ ಪೌಷ್ಟಿಕ ಆಹಾರ ಸಪ್ತಾಹದ ಪ್ರಯುಕ್ತ ಆವಿಷ್ಕರಿಸಿದ ಹೊಸ ಉತ್ಪನ್ನವನ್ನು ಮುಂಬೈನಲ್ಲಿ ಬಿಡುಗಡೆ ಮಾಡಲಾಗಿದೆ.

05-09-2024
Prajavani
Pg 07

ರಾಜ್ಯದಲ್ಲಿ 1,17,267 ಹೆಕ್ಟೇರ್ ಕುಸಿತ | ಅಡಕೆ, ದಾಳಿಂಬೆಯತ್ತ ಬೆಳೆಗಾರರ ಚಿತ್ತ

# ತೆಂಗು ಪ್ರದೇಶ ಇಳಿಕೆ, ಬೆಲೆಯೂ ಇಲ್ಲ

05-09-2024
V-karnataka
Pg 10

■ ಯಳನಾಡು ಮಂಜು ದಾವಣಗೆರೆ
manjunath.lokanath@timesgroup.com

ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ತೆಂಗು ಬೆಳೆ ಪ್ರದೇಶ ಕ್ಷೀಣಿಸುತ್ತಿದೆ. ನಾನಾ ಕಾರಣಗಳಿಗೆ ರೈತರು ಕಲ್ಪತರುನಿಂದ ದೂರು ಹೋಗುತ್ತಿದ್ದು, ದಾವಣಗೆರೆ ಜಿಲ್ಲೆ ಒಂದರಲ್ಲಿಯೇ ಶೇ.45ರಷ್ಟು ತೆಂಗು ಪ್ರದೇಶ ಕಡಿಮೆಯಾಗಿದೆ. ಬೆಳೆಯಿಲ್ಲದೆ ಉತ್ಪನ್ನ ಇಳಿಕೆಯಾದರೂ ತೆಂಗಿನಕಾಯಿ ಬೆಲೆ ಮಾತ್ರ ಏರಿಕೆಯಾಗಿ ಬೆಳೆಗಾರರಿಗೆ ಲಾಭ ಇಲ್ಲ ಎಂಬಂತಾಗಿದೆ.

ರಾಜ್ಯದಲ್ಲಿ 2016ರಲ್ಲಿ ಅಪ್ಪಳಿಸಿದ ಬರದ ಜತೆ ತೆಂಗಿಗೆ ಕಾಣಿಸಿಕೊಂಡ ರೋಗದ ಕಾರಣಕ್ಕೆ ಅನೇಕ ತೋಟಗಳು ಒಣಗಿ ಹೋದವು. ಆ ನಂತರದ ವರ್ಷಗಳಲ್ಲಿ ಮತ್ತೆ ತೆಂಗು ಪುನಶ್ಚೇತನ ಸಾಧ್ಯವಾಗಲೇ ಇಲ್ಲ. ತೆಂಗಿನ ಕಾಯಿ ಬೆಲೆ ಏರಿಕೆ ಆಗದೆ ಇರುವ ಕಾರಣಕ್ಕೆ ತೆಂಗು ಬೆಳೆ ಲಾಭದಾಯಕ ಅಲ್ಲ ಎಂದರಿತ ರೈತರು ನಿಧಾನಕ್ಕೆ ತೆಂಗಿನಿಂದ ದೂರ ಸರಿದು ಅಡಕೆ, ದಾಳಿಂಬೆ ಇನ್ನಿತರ ತೋಟಗಾರಿಕೆ ಬೆಳೆಯುತ್ತ ಚಿತ್ತ ಹರಿಸಿದರು. ಹಾಗಾಗಿ ತೆಂಗು ಪ್ರದೇಶ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿದೆ.



## ಇತರ ರಾಜ್ಯದಲ್ಲೂ ತೆಂಗು ಪ್ರದೇಶ ಕ್ಷೀಣ

ರಾಜ್ಯದಲ್ಲಿ ತುಮಕೂರು, ಹಾಸನ, ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರು, ದಕ್ಷಿಣ ಕನ್ನಡ ತೆಂಗು ಬೆಳೆಯುವ ಪ್ರಮುಖ ಜಿಲ್ಲೆಗಳು. ತೋಟಗಾರಿಕೆ ಇಲಾಖೆ ಅಂಕಿಸಂಖ್ಯೆ ಪ್ರಕಾರ ರಾಜ್ಯದಲ್ಲಿ 6,93,516 ಹೆಕ್ಟೇರ್ ಪ್ರದೇಶದಲ್ಲಿ ಇದ್ದ ತೆಂಗು ಪ್ರದೇಶ ಈ ವರ್ಷಕ್ಕೆ 5,76,249 ಹೆಕ್ಟೇರ್‌ಗೆ ಇಳಿಕೆಯಾಗಿದೆ. ಅಂದರೆ 1,17,267 ಹೆಕ್ಟೇರ್ ಪ್ರದೇಶ ಕಡಿಮೆ ಆಗಿದೆ. ಕರ್ನಾಟಕ ಅಷ್ಟೇ ಅಲ್ಲ ದೇಶದಲ್ಲಿಯೇ ಅತಿ ಹೆಚ್ಚು ತೆಂಗು ಬೆಳೆಯುವ ತಮಿಳುನಾಡು, ಕೇರಳ, ಆಂಧ್ರಪ್ರದೇಶದಲ್ಲೂ ತೆಂಗು ಬೆಳೆ ಪ್ರದೇಶ ಕಡಿಮೆ ಆಗುತ್ತಿದೆ.

ದಾವಣಗೆರೆ ಜಿಲ್ಲೆಯಲ್ಲಿ 11,116 ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಿತ್ತು. 2023-24ನೇ ಸಾಲಿಗೆ 6,134 ಹೆಕ್ಟೇರ್‌ಗೆ ಕುಸಿದಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ 63,087 ಹೆಕ್ಟೇರ್‌ನಿಂದ 60,874ಕ್ಕೆ ಇಳಿದಿದೆ. ಇಲಾಖೆ ಹೇಳುವ ಪ್ರಕಾರ ಮುಂದಿನ ವರ್ಷಗಳಲ್ಲಿ ತೆಂಗು ಬೆಳೆ ಇನ್ನಷ್ಟು ಕ್ಷೀಣಿಸಿದರೂ ಅಚ್ಚರಿ ಇಲ್ಲ.

2017-18ರಲ್ಲಿ ತೆಂಗಿನಕಾಯಿಯೊಂದಕ್ಕೆ 18 ರೂ. ಬೆಲೆ ಸಿಕ್ಕರೂ ಆ ನಂತರ ದರ ಇಳಿಯಿತು. ಈಗ ಉತ್ತಮ ಗಾತ್ರದ ತೆಂಗಿನಕಾಯಿಗೆ ರೈತನಿಗೆ 12 ರೂ. ಬೆಲೆ ಸಿಗುತ್ತಿದೆ. ಗಾತ್ರ ಕಡಿಮೆ ಇರುವ ಣತೆಂಗಿನ ಕಾಯಿಗೆ 7 ರಿಂದ 8 ರೂ. ಬೆಲೆಯಿದೆ. ಹಾಗಾಗಿ ತೆಂಗು ರೈತನಿಗೆ ಲಾಭದಾಯಕ ವಾಗಿಲ್ಲ. ಹೀಗಾಗಿ ತೆಂಗು ಬೆಳೆಯುವ ಪ್ರದೇಶದಲ್ಲಿ ಇತರ ತೋಟಗಾರಿಕೆ ಬೆಳೆ ಬೆಳೆದರೆ ಹೆಚ್ಚಿನ ಲಾಭ ಗಳಿಸಬಹುದಾಗಿದ್ದು, ರೈತರು ಆ ಕಡೆ ನೋಡುತ್ತಿದ್ದಾರೆ.

### ತೆಂಗಿನ ಎಣ್ಣೆ ಬೆಲೆ ಏರಿಸಬಲ್ಲದು !

ತೆಂಗು ಬೆಳೆ ಲಾಭದಾಯಕ ಆಗಿಸಲು ಉಪ ಉತ್ಪನ್ನಗಳ ತಯಾರಿ ಕಸರತ್ತು ನಡೆಯುತ್ತಲೇ ಇದೆ. 2001-02 ಹೊತ್ತಿನಲ್ಲಿ ನೀರಾ ಇಳಿಸುವ ಅನುಮತಿಗಾಗಿ ಮಾಜಿ ಪ್ರಧಾನಿಯೊಬ್ಬರು ಪಾದಯಾತ್ರೆ ಮಾಡಿದ್ದೂ ಉಂಟು. ನಂತರದ ದಿನಗಳಲ್ಲಿ ನೀರಾ ಕಾವು ಕಡಿಮೆಯಾಯಿತು. ಈಗ ಎಲ್ಲೆಡೆ ತೆಂಗಿನ ಎಣ್ಣೆ ಟ್ರೆಂಡ್ ಹೆಚ್ಚುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡುಗೆಗೆ ತೆಂಗಿನ ಎಣ್ಣೆ ಬಳುಸುವ ಪದ್ಧತಿಯಿದೆ. ಕೊಲೆಸ್ಟ್ರಾಲ್ ಮುಕ್ತ ಎಂದು ಹೇಳುವ ತೆಂಗಿನ ಎಣ್ಣೆ ಬಳಕೆ ಹೆಚ್ಚಿದರೆ ತೆಂಗಿಗೆ ಬೆಲೆ ಬರಬಹುದು ಎಂದು ತಜ್ಞರು ಹೇಳುತ್ತಾರೆ.

05-09-2024
V-karnataka Pg 12

# ತೋಟಕ್ಕೆ ಅಂದ ತರುವ ಬರ್ಡ್ ಆಫ್ ಪ್ಯಾರಡೈಸ್



ನಂದನವನದ ಹಕ್ಕಿ ಎಂದೇ ಕರೆಸಿಕೊಳ್ಳುವ ಬರ್ಡ್ ಆಫ್ ಪ್ಯಾರಡೈಸ್ ಅತಿ ಸುಂದರವಾದ, ಜನಪ್ರಿಯ ಹೂಗಳಲ್ಲಿ ಒಂದು. ಇದನ್ನು ಮನೆಯಂಗಳದ ಗಾರ್ಡನ್‌ಗಳಲ್ಲಿ, ಕುಂಡಗಳಲ್ಲಿ, ಹೂದೋಟದಲ್ಲಿ ಸೌಂದರ್ಯತೆ ಹೆಚ್ಚಿಸಲು ಬೆಳೆಯುತ್ತಾರೆ. ಹಕ್ಕಿಯಂತೆ ಕಾಣುವ ಸುಂದರ ಹೂಗಳನ್ನು ಹೂದಾನಿಯಲ್ಲಿ ಇರಿಸಲು, ಹೂಗುಚ್ಛ ತಯಾರಿಸಲು ಹಾಗೂ ಸಮಾರಂಭಗಳಲ್ಲಿ ವೇದಿಕೆಯನ್ನು

ಲವಲVK GARDENಲೋಕ

ಅಲಂಕರಿಸಲು ಬಳಸುತ್ತಾರೆ. ಉತ್ತಮ ಗುಣಮಟ್ಟದ ಹೂಗಳನ್ನು ಪಡೆಯಲು ರಾತ್ರಿಯ ಉಷ್ಣಾಂಶ 10-13 ಡಿಗ್ರಿ ಸೆ. ದಿನದ ಉಷ್ಣಾಂಶ 20-22 ಡಿಗ್ರಿ ಸೆ.ಇದ್ದರೆ ಸೂಕ್ತ. ಬೀಜಗಳು, ಗಿಡದ ಪಕ್ಕದಲ್ಲಿ ಬರುವ ಕಂದುಗಳು ಮತ್ತು ಅಂಗಾಂಶ ಕೃಷಿಯಿಂದ ಉತ್ಪಾದಿಸಿದ ಗಿಡಗಳನ್ನು ನಾಟಿ ಮಾಡಲು ಬಳಸುತ್ತಾರೆ. ಭೂಮಿಯ ಮೇಲೆ ನಾಟಿ ಮಾಡುವಾಗ ಗುಂಡಿಗಳನ್ನು ತೆಗೆದು ಅದಕ್ಕೆ ಕಾಂಪೋಸ್ಟ್ ಮತ್ತು ಮೇಲ್ಮಣ್ಣು ಸೇರಿಸಿ ಗಿಡಗಳನ್ನು ನಾಟಿಮಾಡಬೇಕು. ಗಿಡಗಳು ನಾಟಿಗೊಳ್ಳಲು ಹೆಚ್ಚಿನ ಸಮಯ ಅವಶ್ಯಕತೆ ಇರುವುದರಿಂದ ಅವುಗಳಿಗೆ ತೊಂದರೆಯಾಗದೆ ನೋಡಿಕೊಳ್ಳಬೇಕು. ಗಿಡ ಬೆಳೆಯುವ ಹಂತದಲ್ಲಿ ಮತ್ತು ಹೂ ಬಿಡುವ ಹಂತದಲ್ಲಿ ಪೋಷಕಾಂಶಗಳನ್ನು ಚೆನ್ನಾಗಿ ನೀಡತಕ್ಕದ್ದು. ಇದರಲ್ಲಿ ಕೀಟ ಮತ್ತು ರೋಗಗಳು ಹೆಚ್ಚಾಗಿ ಕಂಡುಬರುವುದಿಲ್ಲ. ಗಿಡದ ಗಾತ್ರ ಹಾಗೂ ವಯಸ್ಸಿಗನುಗುಣವಾಗಿ ಒಂದೂವರೆ ವರ್ಷದಿಂದ ಎರಡು ವರ್ಷಗಳ ನಂತರ ಹೂ ಬಿಡಲು ಪ್ರಾರಂಭಿಸುತ್ತದೆ.

ಡಾ. ಎಂ. ಶಾಲಿನಿ ಸಹಾಯಕ ಪ್ರಾಧ್ಯಾಪಕರು (ತೋಟಗಾರಿಕೆ) ಕೃಷಿ ವಿ.ವಿ., ಬೆಂ.

BUYOUT BUZZ KEEPS DEAL STREET BUSY

# Britannia in Talks to Buy Northeast's Kishlay Foods

## Deal likely to value Guwahati-based snacks maker at ₹600-700 cr

Ratna Bhushan

| BRITANNIA | BRANDS |
|---|---|
| Apr-June qtr ₹3,967 cr Sales; ₹502 cr Net profit | Good Day, NutriChoice, Tiger biscuits; Laughing Cow cheese, BeYou protein bars |

| KISHLAY FOODS | BRANDS |
|---|---|
| Founded by Sandeep Bajaj and Krishna Bajaj in 2001; Raised $15 m led by Norwest Venture Partners in 2018 | Non-Stop, Kishlay, Mamooz |

SIZE OF SNACKS MARKET (₹ cr)

| Year | ₹ cr |
|---|---|
| 2023 | 42,695 |
| 2032* | 95,522 |

Source: IMARC Group *Projected



New Delhi: Britannia Industries is in talks to acquire a controlling stake in Kishlay Foods, a Guwahati-based maker of western and ethnic snacks, biscuits, sweets, potato chips, noodles and tea, at a valuation of ₹600-700 crore, executives aware of the development said.

"The deal is in due diligence stages," one of the executives said. Kishlay Foods, founded by Sandeep Bajaj and Krishna Bajaj as a biscuits maker in 2001, is now "one of the largest snack foods manufacturers of Northeast India" with brands such as Non-Stop, Kishlay and Mamooz, according to its website.

RELIANCE MAY PUT ₹3.9KCR INTO FMCG BIZ ▸▸ PAGE 11

The company recorded annual revenue of $41.8 million, or about ₹350 crore for the year ended March 2023, Tracxn said in a valuation report on Kishlay Foods.

Resurgent Regional Brands ▸▸ 9

## Resurgent Regional Brands

▸▸ From Page 1



"The negotiations, if they go through, will get Britannia a captive market in the Northeast, besides a play in large categories such as noodles and tea where it does not have a presence yet," another executive said.

The Nusli Wadia-controlled biscuits, dairy and bakery products maker is keen on this acquisition "at a time when the snacks market is growing in double digits and competition from regional and direct-to-consumer brands has become hyper-intensive," an executive cited above said.

Emails sent to offices of Britannia and Kishlay Foods remained unanswered till press time Wednesday.

Regional brands have seen a sharp resurgence in sales across biscuits, noodles, soap, hair oil and tea post Covid-19.

"A slew of large established companies has been in the market for tuck-in acquisitions of regional brands, though a number of deals have been stalled on valuation mismatch," one of the executives mentioned above said.

While during the pandemic, regional brands were forced to reduce manufacturing on account of disruptions, since then these brands have seen resurgence, amid reduction in commodity costs and last-mile reach enabled by quick commerce platforms.

Kishlay Foods, which had last raised a funding round of $15 million led by Norwest Venture Partners in 2018, has a distribution network across Northeast India, serving 46 million consumers with more than 200,000 retail touchpoints, according to its website.

"We are expanding our distribution to the rest of India slowly and gradually," it said.

The company has in the past done contract manufacturing for Britannia and PepsiCo, it added.

Britannia, which reported a 3.74% year-on-year increase in sales for the quarter ended June at Rs 3,967.38 crore, has been looking to grow its business in India and abroad.

The maker of Good Day, NutriChoice and Tiger biscuits, and Marie Gold biscuits, croissants, cheeses, rusks, breads and cakes has added newer categories such as protein bars under BeYou brand and foxnuts under Better Snack Co franchise.

### OTHER DEALS

It acquired a controlling stake in Kenya-based Kenafric Biscuits in 2022 to expand its base in the nascent African market.

In the same year, Britannia signed a joint venture with French cheese maker Bel SA to manufacture and sell cheese in India under the latter's brand name, The Laughing Cow. Prior to that, Britannia had inked a joint venture with Greek firm Chipita SA for ready-to-eat croissants in India.

Packaged foods are among the fastest-growing categories within FMCG in recent years, attracting high investor interest.

05-09-2024
Eco Times Pg 04

# 'ಕೈಗಾರಿಕೆಗೆ ಫಲವತ್ತಾದ ಭೂಮಿ ಬೇಡ'

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: 'ರಾಜ್ಯದಲ್ಲಿ ಕೈಗಾರಿಕೆ ಸ್ಥಾಪನೆಗೆ ರೈತರ ವಿರೋಧವಿಲ್ಲ. ಆದರೆ, ಅದಕ್ಕಾಗಿ ಫಲವತ್ತಾದ ಕೃಷಿ ಜಮೀನುಗಳನ್ನು ಪಡೆಯುತ್ತಿರುವುದು ಸರಿಯಲ್ಲ' ಎಂದು ಭಾರತೀಯ ಕಿಸಾನ್ ಸಂಘದ ರಾಜ್ಯ ಕಾರ್ಯದರ್ಶಿ ಗಂಗಾಧರ್ ಕಾಸರಘಟ್ಟ ಅಭಿಪ್ರಾಯಪಟ್ಟರು.

ತ್ಯಾಮಗೊಂಡ್ಲು ಹೋಬಳಿ ಕೊಡಿಗೇಹಳ್ಳಿ ಪಂಚಾಯಿತಿ ವ್ಯಾಪ್ತಿಯ ಹತ್ತುಕುಂಟೆ ಪಾಳ್ಯದಲ್ಲಿ ನಡೆದ ರೈತರ ಸಭೆಯಲ್ಲಿ ಅವರು ಮಾತನಾಡಿದರು.

'ಕೃಷಿ ಭೂಮಿಗೆ ಬದಲಾಗಿ ರಾಜ್ಯದ ವಿವಿಧ ಭಾಗಗಳಲ್ಲಿರುವ ಸುಮಾರು 22 ಸಾವಿರ ಹೇಕ್ಟೆರ್‌ನಷ್ಟು ಬಂಜರು ಭೂಮಿಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗಬೇಕು' ಎಂದು ಹೇಳಿದರು.

ಶಾಂತಲಾ ರೈತ ಉತ್ಪಾದಕ ಸಂಘದ ಅಧ್ಯಕ್ಷ ಜಿ.ಮಂಜುನಾಥ್ ಮಾತನಾಡಿ, 'ಈ ಭಾಗದಲ್ಲಿನ ಬಹುತೇಕ ರೈತರು ಸಣ್ಣ ಹಿಡುವಳಿದಾರರು. ಕೃಷಿ ಮತ್ತು ಹೈನುಗಾರಿಕೆಯಿಂದ ಬರುವ ಅಲ್ಪ ಆದಾಯವೇ ಜೀವನೋಪಾಯಕ್ಕೆ ಮಾರ್ಗವಾಗಿದೆ. ಹೀಗಿರುವಾಗ ಸರ್ಕಾರ ಅಂತಹ ರೈತರ ಜಮೀನುಗಳನ್ನು ಸ್ವಾಧೀನ ಮಾಡಿಕೊಂಡರೆ ಅವರು ಜೀವನ ಸಾಗಿಸುವುದು ಕಷ್ಟವಾಗುತ್ತದೆ' ಎಂದರು.

ಮುಖಂಡ ಬಳ್ಳಗೆರೆಯ ಬಿ.ಎಚ್.ರಾಜು ಮಾತನಾಡಿದರು. ಸಭೆಯಲ್ಲಿ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ದೇವರಾಜು, ತಾಲೂಕು ಕೃಷಿಕ ಸಮಾಜದ ಪ್ರಧಾನ ಕಾರ್ಯದರ್ಶಿ ಕೆ.ಆರ್. ಚನ್ನೇಗೌಡ, ರೈತರಾದ ಪುಟ್ಟಣ್ಣ, ಲಕ್ಷ್ಮಣ, ದಾಸೆಗೌಡ, ರಮೇಶ್, ಪುಟ್ಟಲಿಂಗಯ್ಯ, ಕೃಷ್ಣಪ್ಪ, ಮಾಳಯ್ಯ, ಅಂಜಿನಪ್ಪ, ಗೌಡಪ್ಪ, ನಾರಾಯಣ ಗೌಡ, ಪುಟ್ಟರಾಜು ಸೇರಿದಂತೆ ರೈತರು ಭಾಗವಹಿಸಿದ್ದರು.

05-09-2024
Prajavani Pg 02

For more information visit
University Library Website
Web - uasbagrilibindia.org
E-mail- librarian@uasbangalore.edu.in

ಆಮದಿನಿಂದ ಇಳಿದ ಕಾಳುಮೆಣಸಿನ ದರ | ಇಳುವರಿ ಇಲ್ಲದಿದ್ದರೂ ಬೆಲೆ ಕಾಣದ ಶುಂಠಿ

# ಶುಂಠಿ, ಕಾಳುಮೆಣಸು ಬೆಲೆ ಕುಸಿತ

**ಹೂವಪ್ಪ ಐ. ಎಚ್. ಬೆಂಗಳೂರು**

ರಾಜ್ಯದ ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ಅಡಕೆ ಮತ್ತು ಕಾಫಿ ಜೊತೆಗೆ ಪ್ರಮುಖ ಉಪಬೆಳೆಯಾಗಿ ಬೆಳೆಯುತ್ತಿರುವ ಕಾಳುಮೆಣಸು ಇಲ್ಲಿಯವರೆಗೂ ರೈತರ ಕೈಹಿಡಿದಿತ್ತು. ಆದರೆ ಕಳೆದೊಂದು ತಿಂಗಳಿಂದ ಕಾಳುಮೆಣಸು ದರ ನಿರಂತರವಾಗಿ ಇಳಿಮುಖವಾಗುತ್ತಾ ಹೋಗಿರುವುದು ಬೆಳೆಗಾರರಲ್ಲಿ ಆತಂಕಕ್ಕೀಡುಮಾಡಿದೆ.

ಶ್ರೀಲಂಕಾ, ವಿಯೆಟ್ನಾಂ, ಬ್ರೆಜಿಲ್ ಮೊದಲಾದ ದೇಶಗಳಿಂದ ಭಾರತಕ್ಕೆ ಭಾರಿ ಪ್ರಮಾಣದಲ್ಲಿ ಕಾಳುಮೆಣಸು ಆಮದಾಗಿದ್ದರಿಂದ ದೇಶೀಯ ಮಾರುಕಟ್ಟೆಯಲ್ಲಿ ಕರಿಮೆಣಸು ದರ ಕುಸಿಯಲು ಕಾರಣವಾಗಿದೆ. ಜುಲೈ ತಿಂಗಳಲ್ಲಿ ಶ್ರೀಲಂಕಾದಿಂದ 4,350 ಟನ್ ಹಾಗೂ ವಿಯೆಟ್ನಾಂ ಮತ್ತು ಬ್ರೆಜಿಲ್‌ನಿಂದ ಸುಮಾರು 600 ಟನ್ ಕಾಳುಮೆಣಸನ್ನು ದೇಶಕ್ಕೆ ಆಮದು ಮಾಡಿಕೊಳ್ಳಲಾಗಿದೆ. ದೇಶದಲ್ಲಿ ಬೆಲೆ ಹೆಚ್ಚಿದ ಹಿನ್ನೆಲೆಯಲ್ಲಿ ಆಮದು ಆದೇಶ ಮಾಡಲಾಗಿದ್ದು, ಒಂದು ತಿಂಗಳಲ್ಲೇ ಬೆಲೆ ಕುಸಿದಿದೆ.

ವಿದೇಶಗಳಿಂದ ಮುಖ್ಯವಾಗಿ ನವಸೇವಾ, ತೂತ್ತುಕುಡಿ, ಚೆನ್ನೈ, ಮುಂದ್ರಾ, ತುಘಲಕಾಬಾದ್ ಮತ್ತು ಕೊಚ್ಚಿ ಬಂದರುಗಳ ಮೂಲಕ ಕಾಳುಮೆಣಸು ಆಮದು ಮಾಡಿಕೊಳ್ಳಲಾಗುತ್ತದೆ. ಇಥಿಯೋಪಿಯಾ ಮತ್ತು ವಿಯೆಟ್ನಾಂ ಕಾಳುಮೆಣಸಿನಲ್ಲಿ ವಿಶ್ವದ ಅತಿ ದೊಡ್ಡ ಉತ್ಪಾದಕ ರಾಷ್ಟ್ರಗಳಾಗಿವೆ.



ಕಾಸರಗೋಡಿನಲ್ಲಿ ಒಂದೇ ತಿಂಗಳಲ್ಲಿ ಪ್ರತಿ ಕೆಜಿ ಕಾಳುಮೆಣಸು ಬೆಲೆ 55 ರು. ಕುಸಿದು ಶುಕ್ರವಾರ 615 ರು.ಗೆ ಭಿಕರಿಯಾಗಿದೆ. ಗುರುವಾರ ಇದೇ ಕಾಳುಮೆಣಸಿಗೆ ಕೆಜಿಗೆ 620 ರು. ಇತ್ತು. ಹೀಗೆ ಒಂದೇ ದಿನದಲ್ಲಿ 5 ರು. ಕುಸಿದಿದೆ. ಮುಂದಿನ ದಿನಗಳಲ್ಲಿ ಕಾಳುಮೆಣಸು ದರ 550 ರು.ಗೆ ಆಗಬಹುದೆಂಬ ಎಂಬ ಆತಂಕ ರೈತರನ್ನು ಕಾಡುತ್ತಿದೆ.

ಕಾಳುಮೆಣಸು ಉತ್ಪಾದನೆಯಲ್ಲಿ ಭಾರತ ಐದನೇ ಸ್ಥಾನದಲ್ಲಿದೆ. ಕೇರಳ ಮತ್ತು ಕರ್ನಾಟಕದಲ್ಲಿ ಅತಿ ಹೆಚ್ಚು ಕಾಳುಮೆಣಸು ಉತ್ಪಾದಿಸಲಾಗುತ್ತಿದೆ. ಇಡುಕ್ಕಿ ಕೇರಳದ ಪ್ರಮುಖ ಕಾಳುಮೆಣಸು ಉತ್ಪಾದನಾ ಕೇಂದ್ರವಾಗಿದ್ದು, ವಯನಾಡು ಎರಡನೇ ಸ್ಥಾನದಲ್ಲಿದೆ.

## ಮತ್ತಷ್ಟು ಬೆಲೆ ಕುಸಿಯುವ ಸಾಧ್ಯತೆ

**ಶ್ರೀಲಂಕಾದೊಂದಿಗಿನ ಮುಕ್ತ ವ್ಯಾಪಾರ ಒಪ್ಪಂದದ ಪ್ರಕಾರ ಭಾರತಕ್ಕೆ ಈ ವರ್ಷ 2,000 ಟನ್ ಕಾಳು ಮೆಣಸನ್ನು ಸುಂಕ ರಹಿತ ಆಮದು ಮಾಡಿಕೊಳ್ಳಲು ಅವಕಾಶವಿದೆ. ಆಮದು ಮಾಡಿಕೊಳ್ಳಲಾದ ಕಾಳುಮೆಣಸನ್ನು ಮಾರುಕಟ್ಟೆಯಲ್ಲಿ ತ್ವರಿತವಾಗಿ ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಕೇಂದ್ರ ಸರಕಾರ ಕಾಳುಮೆಣಸನ್ನು ಅಗತ್ಯ ವಸ್ತುಗಳ ವರ್ಗಕ್ಕೆ ಸೇರಿಸಿದ್ದರಿಂದ ಕಾಳುಮೆಣಸಿನ ಬೆಲೆ ಮತ್ತಷ್ಟು ಕುಸಿಯಲಿದೆ ಎಂದು ರೈತರು, ವ್ಯಾಪಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಕಾಳುಮೆಣಸಿನ ಬೆಲೆ ಕುಸಿತ ಹೆಚ್ಚಿನ ರೈತರಿಗೆ ಆರ್ಥಿಕ ಅಸ್ಥಿರತೆ ಉಂಟುಮಾಡಲಿದೆ.**

## ಬಂಗಾರದಷ್ಟಾಗಿದ್ದ ಶುಂಠಿ ಬೆಲೆಯಲ್ಲಿ ಭಾರೀ ಕುಸಿತ; ರೈತರಿಗೆ ನಿರಾಸೆ

**ಮೊನ್ನೆ ಜುಲೈ ತಿಂಗಳಲ್ಲಿ ಬಂಗಾರದ ಬೆಲೆ ಕಂಡಿದ್ದ ಹಸಿ ಶುಂಠಿ ದರ ದಿಢೀರ್ ಕುಸಿದಿದೆ. ಶುಂಠಿ ಬೆಳೆ ಜನಪ್ರಿಯವಾಗಿದ್ದರೂ, ಇಳುವರಿ ಕುಸಿದಿರುವುದು ಒಂದೆಡೆಯಾದರೆ. ಬೆಲೆ ಕುಸಿತ ರೈತರನ್ನು ಚಿಂತೆಗೀಡುಮಾಡಿದೆ. ಮತ್ತೊಂದೆಡೆ ಮಹಾರಾಷ್ಟ್ರ ದಲ್ಲಾಳಿಗಳ ಹಾವಳಿಯಿಂದ ಸ್ಥಳೀಯ ರೈತರು ನಷ್ಟ ಅನುಭವಿಸುವ ಸ್ಥಿತಿ ನಿರ್ಮಾಣವಾಗಿದೆ.**

**ಜೂನ್ 15ರವರೆಗೆ ಒಂದು ಕೆಜಿ ಹಸಿ ಶುಂಠಿ ಹೋಲ್‌ಸೇಲ್ ದರ ಸರಾಸರಿ 400 ರು. ಇತ್ತು. ದೊಡ್ಡಬಳ್ಳಾಪುರ, ಶಿಕಾರಿಪುರ, ಸೊರಬ ಸೇರಿ ರಾಜ್ಯದ ಪ್ರಮುಖ ಶುಂಠಿ ಮಾರುಕಟ್ಟೆಗಳಲ್ಲಿ ಒಟ್ಟು 538 ಕ್ವಿಂಟಾಲ್ ಶುಂಠಿ ಆವಕವಾಗಿತ್ತು. ಆದರೂ ಬೆಳೆಗಾರರಿಗೆ ಸಿಕ್ಕಿರುವುದು ಕೆಜಿಗೆ 90 ರು. ಮಾತ್ರ!**



**ಜುಲೈ ಆರಂಭದಲ್ಲಿ ಕೆಜಿಗೆ 400 ರೂ. ಇದ್ದ ಹಸಿ ಶುಂಠಿ ಹೋಲ್‌ಸೇಲ್ ಬೆಲೆ ಕೇವಲ ಒಂದೇ ತಿಂಗಳಲ್ಲಿ ಶೇ. 90ರಷ್ಟು ಕುಸಿದಿದೆ. ಪ್ರಸ್ತುತ ಒಂದು ಕೆ.ಜಿ ಶುಂಠಿ ಹೋಲ್‌ಸೇಲ್ ದರ 25ರಿಂದ 30 ರೂ.ಗೆ ಇಳಿಕೆಯಾಗಿದೆ. ಅತಿ ಹೆಚ್ಚು ಶುಂಠಿ ಬೆಳೆಯುವ ಕೇರಳದಲ್ಲಿ ಕ್ವಿಂಟಾಲ್ ಶುಂಠಿ ಬೆಲೆ 9,000 ರೂ. ಇದೆ.**

### ರೈತರಿಗೆ 'ಮಹಾ' ಮೋಸ

**ರಾಜ್ಯದ ಮಾರುಕಟ್ಟೆಗಳಲ್ಲಿ ಸೂಕ್ತ ದರ ಸಿಗದಿದ್ದಾಗ ರೈತರು ಮಹಾರಾಷ್ಟ್ರದ ಲಾಥೂರ್ ಮತ್ತಿತರ ಮಂಡಿಗಳ ದಲ್ಲಾಳಿಗಳನ್ನು ಸಂಪರ್ಕಿಸುತ್ತಾರೆ. ಮೊದಲು ಶುಂಠಿ ತರಲು ಹೇಳುವ ದಲ್ಲಾಳಿಗಳು, ರೈತರು ಅಲ್ಲಿಗೆ ಹೋದ ನಂತರ 'ಕ್ವಾಲಿಟಿ' ನೆಪ ಹೇಳಿ ಕಡಿಮೆ ದರಕ್ಕೆ ಕೇಳುತ್ತಾರೆ. ವಾಪಾಸ್ ತಂದರೆ ಸಾಗಣೆ ವೆಚ್ಚವೂ ದಕ್ಕುವುದಿಲ್ಲ ಎಂದು ರೈತರು ಕೊಟ್ಟು ಬರುತ್ತಾರೆ.**